ಒ.ಎಸ್. ನಂ. 51/2019
ಪಿ.ಡಬ್ಲ್ಯೂ: 1
ದಿನಾಂಕ:- 21-11-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ 9 ರ ಪರ ವಕೀಲರಾದ ಶ್ರೀ ಎಸ್.ಎ.ಹೆಚ್. ರವರಿಂದ:

7 ನೇ ವಾದಿ ಅಮ್ಮಸಂದ್ರದಲ್ಲಿದ್ದಾರೆ. 1 ರಿಂದ 6 ನೇ ವಾದಿಗಳು ಪಾರಂಡಹಳ್ಳಿಯಲ್ಲಿದ್ದಾರೆ. 1 ರಿಂದ 6 ನೇ ವಾದಿಗಳ ರೇಷಾನ್ ಕಾರ್ಡ್ ಕೊಟ್ಟಿಲ್ಲ. ದಾವಾಸ್ತಿ ಮೂಲತಃವಾಗಿ ರತ್ನಗೌಂಡರ್ ಗೆ ಸೇರಿತ್ತು ಅಂತ ತೋರಿಸಲು ದಾಖಲೆ ಕೊಟ್ಟಿದ್ದೇನೆ. ರತ್ನಗೌಂಡರ್ ಯಾವಾಗ ತೀರಿ ಹೋಗಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ರತ್ನಗೌಂಡರ್ ರವರ ಹೆಂಡತಿ ರಾಜಮ್ಮ. ಅವರಿಗೆ ಒಟ್ಟು 4 ಜನ ಮಕ್ಕಳು. ಅವರುಗಳೆಂದರೆ ಅನ್ನಪೂರ್ಣಮ್ಮ, ಮಾಣಿಕಂ, ವಡಿವೇಲು ಹಾಗೂ ಅರ್ಜುನಪ್ಪ. ಅವರಲ್ಲಿ ಈಗ ಅರ್ಜುನಪ್ಪ ಮಾತ್ರ ಜೀವಂತ ಇದ್ದಾನೆ. ಈ 4 ಜನರು ಒಟ್ಟು ಕುಟುಂಬದಲ್ಲಿ ವಾಸ ಇದ್ದರು ಅಂತ ತೋರಿಸಲು ದಾಖಲೆ ಕೊಟ್ಟಿಲ್ಲ. ಮೇಲೆ ಹೇಳಿದ 4 ಜನರಿಗೆ ಸುಮಾರು 50 ವರ್ಷಗಳಿಂದಲೂ ಪ್ರತ್ಯೇಕ ಮನೆ ಮಾಡಿಕೊಂಡಿದ್ದು ಅವರದು ಪ್ರತ್ಯೇಕ ರೇಷಾನ್ ಕಾರ್ಡ್ ಇದೆ. ಮೇಲೆ ಹೇಳಿದ ಅನ್ನಪೂರ್ಣಮ್ಮ ಇವರದು ಪಾರಾಂಡಹಳ್ಳಿಯಲ್ಲಿ ಯಾವುದೇ ಮನೆ ಇಲ್ಲ. ಮೇಲೆ ಹೇಳಿದ 4 ಜನರ ಪೈಕಿ ಅನ್ನಪೂರ್ಣಮ್ಮರವರನ್ನ ಹೊರತುಪಡಿಸಿ ಬಾಕಿ 3 ಜನರ ಪ್ರತ್ಯೇಕ ಮನೆಗಳನ್ನ ಈ ದಾವೆಯಲ್ಲಿ ಸೇರಿಸಿಲ್ಲ. ಈ ವಿಷಯವನ್ನ ನಾನು ದಾವೆಯನ್ನ ಹಾಕುವ ಸಮಯದಲ್ಲಿ ನಮ್ಮ ವಕೀಲರಿಗೆ ಹೇಳಿಲ್ಲ. ಮೇಲೆ ಹೇಳಿದ 4 ಜನರು ಅವರ ಜೀವಿತ ಅವಧಿಯಲ್ಲಿ ದಾವಾಸ್ತಿಯ ಬಾಬತ್ತು ಯಾವುದೇ ದಾವೆಯನ್ನ ಹಾಕಿಲ್ಲ. ದಾವಾಸ್ತಿ ರತ್ನಗೌಂಡರ್ ಇವರಿಗೆ ಮಂಜೂರಾದ ಬಗ್ಗೆ ದಾಖಲೆಯನ್ನ ಕೊಟ್ಟಿದ್ದೇನೆ. 9 ನೇ ಪ್ರತಿವಾದಿಯನ್ನ ಯಾವ ಕಾರಣಕ್ಕೆ ಈ ದಾವೆಯಲ್ಲಿ ಪಾರ್ಟಿ ಮಾಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. 9 ನೇ ಪ್ರತಿವಾದಿ ದಾವಾಸ್ತಿಯನ್ನ ಯಾರಿಂದ ಮತ್ತು ಯಾವಾಗ ಖರೀದಿ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಈಗ ದಾವಾಸ್ತಿಯ ಪಹಣಿಯಲ್ಲಿ 9 ನೇ ಪ್ರತಿವಾದಿಯ ಹೆಸರು ಬರುತ್ತಿದೆ ಎಂದರೆ ನಿಜ. ದಾವಾಸ್ತಿಯನ್ನ 9 ನೇ ಪ್ರತಿವಾದಿ ನಿಪಿ.16 ರಲ್ಲಿ ಕಾಣಿಸಿದ ದಿನಾಂಕದಂದು ನಿಪಿ.14 ರಂತೆ ಖರೀದಿ ಮಾಡಿದ್ದಾಳೆ ಎಂದರೆ ನಿಜ. ಈ ಹಂತದಲ್ಲಿ ಸಾಕ್ಷಿ ನಿಪಿ.16 ನ್ನ ನೋಡಿ ಉತ್ತರಿಸುತ್ತಾರೆ. ನಿಪಿ.16 ರ ದಾಖಲೆಯನ್ನ ನಾನು ಇಲ್ಲಿಯವರೆಗೂ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ. ನಿಪಿ.16 ರಲ್ಲಿ 9 ನೇ ಪ್ರತಿವಾದಿ ದಾವಾಸ್ತಿಯನ್ನಲ್ಲದೆ ಇನ್ನೊಂದು ಆಸ್ತಿಯನ್ನ ಖರೀದಿ ಮಾಡಿರಬಹುದು ಎಂದರೆ ಇರಬಹುದು ನನಗೆ ಗೊತ್ತಿಲ್ಲ. ನಿಪಿ.16 ರಲ್ಲಿ ಕಾಣಿಸಿದ ಇನ್ನೊಂದು

ಆಸ್ತಿ 8 ನೇ ಪ್ರತಿವಾದಿಗೆ ಸೇರಿದ್ದು ಅಂತ ಕಾಣಿಸಲಾಗಿದೆ ಎಂದರೆ ನಿಜ. 8 ನೇ ಪ್ರತಿವಾದಿ ಸದರಿ ಆಸ್ತಿಯನ್ನ ದಿನಾಂಕ 20.04.1983 ರಲ್ಲಿ ಖರೀದಿಸಿದ್ದಾರೆ ಎಂದರೆ ಇರಬಹುದು. 8 ನೇ ಪ್ರತಿವಾದಿ ಸದರಿ ಆಸ್ತಿಯನ್ನ 20.04.1983 ರ ಆಧಾರದಲ್ಲಿ 10 ನೇ ಪ್ರತಿವಾದಿಗೆ ದಿನಾಂಕ 11.05.2000 ರಂದು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಬಾಬತ್ತು ಎಂ ಆರ್ 1/2000 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಪಹಣಿಯಲ್ಲಿ 10 ನೇ ಪ್ರತಿವಾದಿಯ ಹೆಸರು 2000 ದಿಂದ 2004 ರ ಪಹಣಿಯಲ್ಲಿ ಬರುತ್ತಿತ್ತು ಎಂದರೆ ನಿಜ. ಸದರಿ ಆಸ್ತಿಯನ್ನ 11 ನೇ ಪ್ರತಿವಾದಿ ದಿನಾಂಕ 29.06.2000 ರಂದು ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ತದನಂತರ ದಿನಾಂಕ 02.03.1991 ರಂದು 11 ನೇ ಪ್ರತಿವಾದಿಗೆ ಮಾರಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಆಧಾರದಲ್ಲಿ 11 ನೇ ಪ್ರತಿವಾದಿಯ ಹೆಸರು ಸದರಿ ಆಸ್ತಿಯ ಪಹಣಿಗಳಲ್ಲಿ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ 10 ಮತ್ತು 11 ನೇ ಪ್ರತಿವಾದಿಗಳು 9 ನೇ ಪ್ರತಿವಾದಿಗೆ ಅವರವರಿಗೆ ಬಂದ ಆಸ್ತಿಯನ್ನ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿಂದ ಇಲ್ಲಿಯವರೆಗೂ 9 ನೇ ಪ್ರತಿವಾದಿಯ ಹೆಸರು ಪಹಣಿಯಲ್ಲಿ ಬರುತ್ತಿದೆ ಎಂದರೆ ಸಾಕ್ಷಿಯು 9 ನೇ ಪ್ರತಿವಾದಿ, ರತ್ನಗೌಂಡರ್ ಹಾಗೂ ರಾಜಮ್ಮ ಎಲ್ಲರ ಹೆಸರು ಬರುತ್ತಿದೆ ಎನ್ನುತ್ತಾರೆ. ನಾನು ಈ ದಾವೆಯನ್ನ ದಾವಾಸ್ತಿಯ ಸ್ವಾಧೀನ ಕೇಳಿ ಹಾಕಿದ್ದೇನೆ. ಮೇಲೆ ಹೇಳಿದ ದಾಖಲಾತಿಗಳು ಅಸಿಂಧು ಅಂತ ನಾನು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ. ಈಗಲೂ ಕೂಡ ದಾವಾಸ್ತಿಯ ಸ್ವಾಧೀನದಲ್ಲಿ 9 ನೇ ಪ್ರತಿವಾದಿ ಇದ್ದಾಳೆ ಎಂದರೆ ಸರಿಯಲ್ಲ. ನನ್ನ ತಂದೆ 2018 ರಲ್ಲಿ ತೀರಿ ಹೋಗಿದ್ದಾರೆ. ನಮಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿಯೇ ದಾವಾಸ್ತಿ ಸ್ವಾಧೀನದಲ್ಲಿದ್ದಾಳೆ ಎಂದರೆ ಸರಿಯಲ್ಲ. ದಾವಾಸ್ತಿಯು ಮತ್ತು ರತ್ನಗೌಂಡರ್ ಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 76 ರ ಗಡಿಗುರುತು ನನಗೆ ಗೊತ್ತಿಲ್ಲ. ಮೇಲೆ ಹೇಳಿದ ದಾವಾಸ್ತಿಯ ವ್ಯವಹಾರದ ಬಗ್ಗೆ ನಮಗೆ ಈ ಮುಂಚೆಯೇ ಗೊತ್ತಾಗಿತ್ತು ಹಾಗೂ ನಾವು 9 ನೇ ಪ್ರತಿವಾದಿಗೆ ತೊಂದರೆ ಕೊಡುವ ದುರುದ್ದೇಶದಿಂದ ಕಾಲಮಿತಿ ಮೀರಿ ಈ ದಾವೆಯನ್ನ ಹಾಕಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ತಿ ರತ್ನಗೌಂಡರ್ ರಿಂದ ರಾಜಮ್ಮರವರಿಗೆ ಬಂದಿದೆ. ದಾವಾಸ್ತಿ ರಾಜಮ್ಮರವರಿಗೆ ಮಂಜೂರಾಗಿದೆ. ರತ್ನಗೌಂಡರ್ ಗೆ ಮಂಜೂರಾಗಿಲ್ಲ. ದಾವಾಸ್ತಿ ರತ್ನಗೌಂಡರ್ ಗೆ ಆಗಲೀ ಅಥವಾ ರಾಜಮ್ಮರವರಿಗೆ ಆಗಲೀ ಮಂಜೂರಾಗಿದೆ ಅಂತ ತೋರಿಸಲು ನಾನು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಸತ್ಯಾಂಶ ಗೊತ್ತಿದ್ದರೂ ಕೂಡ ನಾನು ಸುಳ್ಳು ಸಂಗತಿಗಳನ್ನ ಕಾಣಿಸಿ ಸುಳ್ಳು ದಾಖಲೆಗಳನ್ನ ಸೃಷ್ಟಿಸಿ ಸುಳ್ಳು

ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ೯ ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ಏನೇಲ್ಲಾ ಸಂಗತಿಗಳನ್ನ ಕಾಣಿಸಿದ್ದಾಳೆ ಎಂಬುದನ್ನ ನಾನು ತಿಳಿದುಕೊಂಡಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ೯ ನೇ ಪ್ರತಿವಾದಿಯ ಬಗ್ಗೆ ಎಲ್ಲಿಯು ಹೇಳಿಲ್ಲ ಎಂದರೆ ನಿಜ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

**(ಮಹೇಶ ಶಂ.ಪಾಟೀಲ)**

ಹಿರಿಯ ಸಿ.ಜೆ ಮತ್ತು ಪ್ರಧಾನ ಜೆಎಂಎಫ್‌ಸಿ

ಕೆಜಿಎಫ್